ನಿಮ್ಮೊಡನೆ

# ಪ್ರಶಸ್ತಿ ಪ್ರದಾನ: ತಾರತಮ್ಯ ಸಲ್ಲದು

ಕಲಾತ್ಮಕ ಚಿತ್ರಗಳನ್ನು ಕಡೆಗಣಿಸಿ ವ್ಯಾಪಾರಿ ಚಿತ್ರಗಳಿಗೆ ಮನ್ನಣೆ ನೀಡುವ ಪ್ರವೃತ್ತಿ ಹೆಚ್ಚುತ್ತಿರುವ ಬಗ್ಗೆ ಹಾಗೂ ಬಾಲಿವುಡ್‌ಗೆ ವಿಪರೀತ ಪ್ರಾಮುಖ್ಯತೆ ನೀಡುವ ಕಾರಣಕ್ಕೆ ಚಲನಚಿತ್ರ ರಾಷ್ಟ್ರಪ್ರಶಸ್ತಿಗಳು ಇತ್ತೀಚಿನ ವರ್ಷಗಳಲ್ಲಿ ವಿವಾದಕ್ಕೆ ಕಾರಣವಾಗಿವೆ. ಈ ಬಾರಿ ಪ್ರಶಸ್ತಿಗಳ ಆಯ್ಕೆಗೆ ಸಂಬಂಧಿಸಿದಂತೆ ಹೆಚ್ಚಿನ ತಕರಾರು ವ್ಯಕ್ತವಾಗಿಲ್ಲವಾದರೂ, ಪ್ರಶಸ್ತಿ ಪ್ರದಾನ ಸಮಾರಂಭವೇ ವಿವಾದಕ್ಕೀಡಾಗಿದೆ. ಚಲನಚಿತ್ರ ಪ್ರಶಸ್ತಿಗಳ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಸುಮಾರು 50 ಪ್ರಶಸ್ತಿ ವಿಜೇತರು ಕಾರ್ಯಕ್ರಮದಿಂದ ಹೊರಗುಳಿದಿದ್ದಾರೆ. 65ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಪ್ರದಾನ ಸಮಾರಂಭದಲ್ಲಿ, ಆಯ್ದ ಕೆಲವರಿಗಷ್ಟೇ ರಾಷ್ಟ್ರಪ್ರತಿಗಳು ಪ್ರಶಸ್ತಿ ನೀಡುವುದನ್ನು ವಿರೋಧಿಸಿ, ಕಾರ್ಯಕ್ರಮದಿಂದಲೇ ಹೊರಗುಳಿದವರದ್ದು ದಿಟ್ಟ ನಿರ್ಧಾರ. ಆದರೆ ಕೇಂದ್ರ ಸರ್ಕಾರಕ್ಕೆ ಇದು ಮುಜುಗರ ಉಂಟುಮಾಡಿದಂತೇನೂ ಕಾಣಿಸುತ್ತಿಲ್ಲ. ಅಂಚೆಯ ಮೂಲಕ ಪ್ರಶಸ್ತಿಗಳನ್ನು ವಿಜೇತರಿಗೆ ತಲುಪಿಸಲು ಸರ್ಕಾರ ಮುಂದಾಗಿದೆ.

ಕಾರ್ಯಕ್ರಮವನ್ನು ಬಹಿಷ್ಕರಿಸುವ ನಿರ್ಧಾರ ದಿಢೀರ್ ಎಂದು ಉಂಟಾದುದಲ್ಲ. ರಾಷ್ಟ್ರಪತಿ ರಾಮ್‌ನಾಥ್ ಕೋವಿಂದ್ ಅವರು 11 ಮಂದಿಗಷ್ಟೇ ಪ್ರಶಸ್ತಿ ನೀಡುವ ನಿರ್ಧಾರವನ್ನು ವಿರೋಧಿಸಿ ಪತ್ರ ಬರೆಯಲಾಗಿತ್ತು. ಎಲ್ಲ ವಿಜೇತರಿಗೆ ರಾಷ್ಟ್ರಪತಿಗಳೇ ಪ್ರಶಸ್ತಿ ನೀಡಬೇಕೆಂದು ಒತ್ತಾಯಿಸಲಾಗಿತ್ತು. ಈ ಮೊದಲು ರಾಷ್ಟ್ರಪತಿಗಳೇ ಪ್ರಶಸ್ತಿ ನೀಡಿದ್ದಾರೆ. ಆದರೆ, ಈ ಸಂಪ್ರದಾಯವನ್ನು ಕೋವಿಂದ್ ಮುರಿದಿದ್ದಾರೆ, ಆ ಮೂಲಕ ಪ್ರಶಸ್ತಿಪ್ರದಾನ ಕಾರ್ಯಕ್ರಮವೂ ಕಳಾಹೀನವಾಗಿದೆ.

ಈ ಬಹಿಷ್ಕಾರದ ನಿರ್ಧಾರ ಐತಿಹಾಸಿಕವಾದುದು. ಯಾವುದೇ ಕಲೆ ಪ್ರತಿಪಾದಿಸುವ ಸ್ವಾತಂತ್ರ್ಯ, ಸ್ವಾಭಿಮಾನದ ಮೌಲ್ಯಗಳಿಗೆ ಪೂರಕವಾದುದು. ‘ರಾಷ್ಟ್ರಪತಿ ಪದಕ’ ಪಡೆಯುವುದು ಯಾವುದೇ ಕಲಾವಿದ, ತಂತ್ರಜ್ಞನ ಜೀವಮಾನದ ಕನಸು. ಇಂಥ ಕನಸು ನನಸಾದ ಸಂದರ್ಭದಲ್ಲಿ, ರಾಷ್ಟ್ರಪತಿಗಳ ಹೊರತು ಬೇರೊಬ್ಬರಿಂದ ಪ್ರಶಸ್ತಿ ಪಡೆಯುವುದು ಸಹಜವಾಗಿಯೇ ಇರುಸುಮುರುಸು ಉಂಟುಮಾಡುತ್ತದೆ. ರಾಷ್ಟ್ರಪತಿಗಳು ಕೆಲವರಿಗಷ್ಟೇ ಪ್ರಶಸ್ತಿಪ್ರದಾನ ಮಾಡುವುದು ತಾರತಮ್ಯದ ದ್ಯೋತಕವೂ ಆಗಿದೆ. ಈ ಹಿನ್ನೆಲೆಯಲ್ಲಿಯೇ, ‘ಚಿತ್ರೋದ್ಯಮದಲ್ಲಿ ಸ್ಟಾರ್ ಕಲಾವಿದರನ್ನು ಹಾಗೂ ಉಳಿದ ತಂತ್ರಜ್ಞರನ್ನು ಸವಲತ್ತಿನ ಹಿನ್ನೆಲೆಯಲ್ಲಿ ಬೇರೆ ಬೇರೆಯಾಗಿ ಗುರ್ತಿಸಲಾಗುತ್ತದೆ. ಈ ತಾರತಮ್ಯ ಪ್ರಶಸ್ತಿ ಪ್ರದಾನ ಸಮಾರಂಭದಲ್ಲೂ ಕಾಣಿಸಿದ್ದು ದುರದೃಷ್ಟಕರ’ ಎಂದು ಹೇಳಿರುವ ಅಂತರರಾಷ್ಟ್ರೀಯ ಖ್ಯಾತಿಯ ಧ್ವನಿ ಸಂಯೋಜಕ ರಸೂಲ್ ಪೂಕಟ್ಟಿ ಅವರ ಮಾತುಗಳನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ.

‘125 ಪ್ರಶಸ್ತಿ ವಿಜೇತರ ಜೀವನದಲ್ಲಿ ಇದೊಂದು ಅಮೂಲ್ಯ ಕ್ಷಣ’ ಎಂದು ರಾಷ್ಟ್ರಪತಿ ಕೋವಿಂದ್ ಅವರು ಪ್ರಶಸ್ತಿ ಪ್ರದಾನ ಸಮಾರಂಭದ ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಆದರೆ, ಈ ಅಮೂಲ್ಯ ಕ್ಷಣ 11 ಮಂದಿಯ ಪಾಲಿಗಷ್ಟೇ ಒದಗಿದೆ ಎನ್ನುವುದನ್ನು ಅವರು ಏಕೆ ಗಂಭೀರವಾಗಿ ಪರಿಗಣಿಸಲಿಲ್ಲ? ಯಾವುದೇ ಕಾರ್ಯಕ್ರಮದಲ್ಲಿ ಒಂದು ಗಂಟೆಗಿಂತಲೂ ಹೆಚ್ಚಿನ ಸಮಯವನ್ನು ರಾಷ್ಟ್ರಪತಿ ಕೋವಿಂದ್ ಅವರು ಕಳೆಯುವುದಿಲ್ಲ ಎನ್ನುವ ಕಾರಣವನ್ನು ಕೇಂದ್ರ ಸರ್ಕಾರ ನೀಡುತ್ತಿದೆ. ಹಾಗಾದರೆ, ಈವರೆಗಿನ ಎಲ್ಲ ರಾಷ್ಟ್ರಪತಿಗಳು ಪಾಲಿಸಿದ ಶಿಷ್ಟಾಚಾರವನ್ನು ಕೋವಿಂದ್ ಮೀರಬಹುದೇ? ರಾಷ್ಟ್ರಪತಿಗಳ ತೀರ್ಮಾನವನ್ನು ಎಲ್ಲ ಪ್ರಶಸ್ತಿ ವಿಜೇತರಿಗೆ ಸಾಕಷ್ಟು ಮುಂಚಿತವಾಗಿ ತಿಳಿಸುವ ಗೋಜಿಗೂ ಸರ್ಕಾರ ಹೋಗಿಲ್ಲ. ಆಯ್ದ ಕೆಲವರಿಗಷ್ಟೇ ರಾಷ್ಟ್ರಪ್ರತಿಗಳು ಪ್ರಶಸ್ತಿ ಪ್ರದಾನ ಮಾಡುವರು ಎನ್ನುವ ವಿಷಯ ರಿಹರ್ಸಲ್ ಸಂದರ್ಭದಲ್ಲಿ ವಿಜೇತರ ಗಮನಕ್ಕೆ ಬಂದಿದೆ. ವಿದೇಶಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಕೆಲವರು ತಮ್ಮ ಸ್ವಂತ ಖರ್ಚಿನಲ್ಲಿ ಪ್ರಶಸ್ತಿಪ್ರದಾನ ಸಮಾರಂಭಕ್ಕೆ ಬಂದಿದ್ದಾರೆ. ರಾಷ್ಟ್ರಪತಿಗಳ ಕೈಯಿಂದ ಪದಕ ಸ್ವೀಕರಿಸಬೇಕು ಎನ್ನುವ ಉತ್ಸಾಹದಲ್ಲಿ ದೆಹಲಿಗೆ ಬಂದವರು ಬದಲಾದ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಕಾರ್ಯಕ್ರಮವನ್ನೇ ಬಹಿಷ್ಕರಿಸಿರುವುದು ಸರಿಯಾಗಿಯೇ ಇದೆ.

ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ನಡವಳಿಕೆ ಆಕಸ್ಮಿಕವಾದುದು ಎಂದು ನಂಬುವುದು ಕಷ್ಟ. ಪುಣೆಯ ಫಿಲ್ಮ್ ಇನ್‌ಸ್ಟಿಟ್ಯೂಟ್ ಹಾಗೂ ಸೆನ್ಸಾರ್ ಮಂಡಳಿ ಅಧ್ಯಕ್ಷರ ನೇಮಕಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ತಳೆದ ನಿಲುವುಗಳು ವಿವಾದಕ್ಕೆ ಕಾರಣವಾಗಿದ್ದವು. ಸಿನಿಮಾಗಳನ್ನು ನಿಷೇಧಿಸುವ ರಾಜಕಾರಣದಲ್ಲೂ ಆಡಳಿತಾರೂಢ ಸರ್ಕಾರಗಳು ತೊಡಗಿಕೊಂಡಿದ್ದವು. ‘ಪದ್ಮಾವತ್’ ಚಿತ್ರಕ್ಕೆ ಸಂಬಂಧಿಸಿದ ವಿವಾದದಲ್ಲಿ ಮೂಗು ಕೊಯ್ಯುವ, ರುಂಡ ಕತ್ತರಿಸುವ ಬೆದರಿಕೆಗಳು ಕೇಳಿಬಂದಿದ್ದವು. ಈ ಪ್ರಸಂಗಗಳನ್ನು ಕೂಡ, ಪ್ರಶಸ್ತಿಪ್ರದಾನ ವಿವಾದದ ಭಾಗವಾಗಿಯೇ ನೋಡಬೇಕಾಗಿದೆ. ಇವೆಲ್ಲವೂ ಸೃಜನಶೀಲ ಅಭಿವ್ಯಕ್ತಿಯ ಬಗ್ಗೆ ಪ್ರಭುತ್ವಕ್ಕೆ ಇರುವ ಅಸಹನೆಯ ಉದಾಹರಣೆಗಳಂತಿವೆ.

■ ರಘುನಾಥ ಚ.ಹ.

ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಪ್ರದಾನ ಸಮಾರಂಭದಲ್ಲಿ, ಆಯ್ದ ಕೆಲವರಿಗಷ್ಟೇ ರಾಷ್ಟ್ರಪ್ರತಿಗಳು ಪ್ರಶಸ್ತಿ ನೀಡುವುದನ್ನು ವಿರೋಧಿಸಿ, ಕಾರ್ಯಕ್ರಮದಿಂದಲೇ ಹೊರಗುಳಿದವರದ್ದು ದಿಟ್ಟ ನಿರ್ಧಾರ. ಆದರೆ ಕೇಂದ್ರ ಸರ್ಕಾರಕ್ಕೆ ಇದು ಮುಜುಗರ ಉಂಟುಮಾಡಿದಂತೇನೂ ಕಾಣಿಸುತ್ತಿಲ್ಲ. ಅಂಚೆಯ ಮೂಲಕ ಪ್ರಶಸ್ತಿಗಳನ್ನು ವಿಜೇತರಿಗೆ ತಲುಪಿಸಲು ಸರ್ಕಾರ ಮುಂದಾಗಿದೆ.



ವಿಜಯಕುಮಾರಿ ಆರ್.